ಇಂದು ದಿನಾಂಕ: 05.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು : 3 ನೇ ಪ್ರತಿವಾದಿ ಪರ ಶ್ರೀ.ಬಿ.ಡಿ.ಎಂ.ವಕೀಲರಿಂದಃ**

ನಾನು 10 ನೇ ತರಗತಿ ಓದಿದ್ದು ನನಗೆ ಕನ್ನಡ ಓದು ಬರಹ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದಿ, ಪ್ರತಿವಾದಿ 2 ಮತ್ತು 3 ರವರ ತಾತ ಕಾಳೇಗೌಡ ಎಂದರೆ ಸರಿ. ಸಣ್ಣೇಗೌಡ ವಾದಿ, ಪ್ರತಿವಾದಿ 2 ಮತ್ತು 3 ರವರ ತಂದೆ ಎಂದರೆ ಸರಿ. ಸದರಿ ಸಣ್ಣೇಗೌಡ ಪ್ರತಿವಾದಿ 4 ಮತ್ತು 5 ರವರ ತಾತ ಎಂದರೆ ಸರಿ. ಕಾಳೇಗೌಡರಿಗೆ 3 ಜನ ಗಂಡು ಮಕ್ಕಳು ಅವರೆಂದರೆ ಸಣ್ಣೇಗೌಡ, ಕರೀಗೌಡ, ಸಣ್ಣೇಗೌಡ ಅಲಿಯಾಸ್ ಚಿಕ್ಕಸಣ್ಣೇಗೌಡ ಎಂದರೆ ಸರಿ. ಕರೀಗೌಡರು ಕಾಳೇಗೌಡರ 2 ನೇ ಮಗ ಎಂದರೆ ಸರಿ. ಕರೀಗೌಡರ ಹೆಂಡತಿಯ ಹೆಸರು ನಿಂಗಮ್ಮ. ಕಾಳೇಗೌಡರ 3 ನೇ ಮಗ ಸಣ್ಣೇಗೌಡ ಅಲಿಯಾಸ್ ಚಿಕ್ಕಸಣ್ಣೇಗೌಡರಿಗೆ ಜಯಣ್ಣ ಮತ್ತು ಸತೀಶ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಉಲ್ಲೆಖಿಸಿರುವ ಸರ್ವೆ ನಂಬರ್ ಗಳ ಜಮೀನು ಮಾರಾಟ ಮಾಡಿರುವ ಬಗ್ಗೆ ಕ್ರಯ ಪತ್ರ ನೋಡಿಲ್ಲ. ನಾನು ಹೇಳಿದಂತೆ ಯಾವುದೇ ಕ್ರಯ ಪತ್ರ ಆಗಿಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.40 ಮತ್ತು 23 ಕ್ಕೆ ಸಂಬಂಧಿಸಿದಂತೆ ಜಯಣ್ಣ ಮತ್ತು ಸತೀಶರವರ ಹೆಸರಿನಲ್ಲಿ ಆರ್.ಟಿ.ಸಿ.ಗಳು ಬರುತ್ತಿವೆ ಎಂದರೆ ಇತ್ತೀಚೆಗೆ ಮಾಡಿಸಿಕೊಂಡಿದ್ದಾರೆ ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ಆರ್.ಟಿ.ಸಿ. ಗಳನ್ನು ನಿ.ಡಿ–1 ಎಂದು ಗುರುತಿಸಲಾಯಿತು. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಸರ್ವೆ ನಂಬರ್ ಗಳು ಕಾಳೇಗೌಡ ಮತ್ತು ಸಣ್ಣೇಗೌಡ ಅಲಿಯಾಸ್ ಚಿಕ್ಕಸಣ್ಣೇಗೌಡರಿಗೆ ಹೋಗಿದೆ ಎಂದರೆ ಹೌದು ಅವರ ಅಣ್ಣ ತಮ್ಮಂದಿರಿಗೆ ಬಿಟ್ಟು ಕೊಟ್ಟಿದೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಸರ್ವೆ ನಂಬರ್ ಗಳ ಜಮೀನು ಸಣ್ಣೇಗೌಡ ಅಲಿಯಾಸ್ ಚಿಕ್ಕಸಣ್ಣೇಗೌಡರು ಸತ್ತ ನಂತರ ಪೌತಿ ಖಾತೆಯಾಗಿದೆ ಎಂದರೆ ಸರಿಯಲ್ಲ ಮೊದಲೇ ಖಾತೆಯಾಗಿತ್ತು. ವಾದಿಗಳ ತಂದೆ ಭತ್ತ, ರಾಗಿ, ಜೋಳ, ಹೋರಿ ವ್ಯಾಪಾರ ಮಾಡುತ್ತಿದ್ದು ಅದರಿಂದ ಸಾಕಷ್ಟು ಹಣ ಸಂಪಾದಿಸುತ್ತಿದ್ದರು ಎಂದರೆ ಅಷ್ಟೇನೂ ಸಿಗುತ್ತಿರಲಿಲ್ಲ. ಸಣ್ಣೇಗೌಡರು ಪಂಚಾಯಿತಿ ಸದಸ್ಯರು ಮತ್ತು

ಯಜಮಾನರು ಆಗಿದ್ದರು ಎಂದರೆ ಸರಿ. ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ತಂದೆ 30 ವರ್ಷಗಳ ಹಿಂದೆ ಮೈಸೂರಿಗೆ ಹೋಗಿದ್ದರು ಎಂದರೆ ಸರಿ, ಮೈಸೂರಿನ ಹೆಬ್ಬಾಳ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕಮಲಾ ಫುಡ್ ಹೌಸ್ ಪ್ರಾರಂಭಿಸಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ಉಪ್ಪಿನಕಾಯಿ, ಟೊಮೆಟೊ ಸಾಸ್ ಮುಂತಾದವುಗಳನ್ನು ತಯಾರಿಸುತ್ತಿದ್ದರು ಎಂದರೆ ಸುಳ್ಳು. ಕೆಲವು ಸಲ ಮೈಸೂರಿಗೆ ಹೋಗಿ ಅಲ್ಲಿ ಉಳಿದುಕೊಳ್ಳುತ್ತಿದ್ದೆ ಎಂದರೆ ಸುಳ್ಳು. ವಾದಿ ತಂದೆ ಮಧ್ಯಪಾನ ಮಾಡುತ್ತಿದ್ದುದ್ದನ್ನು ನಾನು ನೋಡಿಲ್ಲ ಆದರೆ ಅವರು ಕುಡಿಯುತ್ತಿದ್ದ ಬಗ್ಗೆ ಜನ ಹೇಳುತ್ತಿದ್ದರು. ಒಂದು ವೇಳೆ ಅವರು ಕುಡಿಯುತ್ತಿದ್ದರೆ ಆಸ್ತಿಗಳನ್ನು ಸಂಪಾದನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಆ ತರಹ ಕುಡಿಯುತ್ತಿರಲಿಲ್ಲ. ಸಣ್ಣೇಗೌಡರು ಕೆಲವು ಸಂದರ್ಭದಲ್ಲಿ ಫ್ಯಾಕ್ಟರಿಯಲ್ಲಿ ವಾಸ ಮಾಡುತ್ತಿದ್ದರು ಕೆಲವು ಸಂದರ್ಭದಲ್ಲಿ ವಾದಿ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಭೂತನಹಳ್ಳಿಯಲ್ಲಿ ವಾಸವಿರುತ್ತಿದ್ದರು. 3 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ವಾದಿ ಮತ್ತು 2 ನೇ ಪ್ರತಿವಾದಿ ಪರ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಸರ್ವೆ ನಂಬರ್ ಗಳು ಕಾಳೇಗೌಡರ 2 ಮತ್ತು 3 ನೇ ಮಕ್ಕಳು ಕರೀಗೌಡ ಮತ್ತು ಸಣ್ಣೇಗೌಡ ಅಲಿಯಾಸ್ ಚಿಕ್ಕಸಣ್ಣೇಗೌಡರಿಗೆ ಹೋಗಿವೆ ಎಂದರೆ ಸರಿಯಲ್ಲ ಅವರು ಇದ್ದಾಗಲೇ ಅವರ ತಮ್ಮಂದಿರಿಗೆ ವಹಿಸಿದ್ದಾರೆ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**